ಕರ್ನಾಟಕ ಸರ್ಕಾರ
ಸಹಕಾರ ಚುನಾವಣಾ ಪ್ರಾಧಿಕಾರ

ಸಂಖ್ಯೆ:ಸಚುಪ್ರಾ/ಮ.ಪಟ್ಟಿ ಪರಿಷ್ಕರಣೆ / 50 /2015

3 ನೇ ಮಹಡಿ, ಶಾಂತಿನಗರ ಟಿ.ಟಿ.ಎಂ.ಸಿ. ಕಟ್ಟಡ
ಬಿ.ಎಂ.ಟಿ.ಸಿ. 'ಎ' ಬ್ಲಾಕ್, ಶಾಂತಿನಗರ,
ಬೆಂಗಳೂರು-27.
ದಿನಾಂಕ: **12.06.2015**

# ಸುತ್ತೋಲೆ

ವಿಷಯ: ಸಹಕಾರ ಸಂಘಗಳಲ್ಲಿ / ಸಹಕಾರಿಗಳಲ್ಲಿ ಆಡಳಿತ ಮಂಡಲಿಗಳ ಚುನಾವಣೆ ನಡೆಸುವಾಗ ಸಂಘಗಳ / ಸಹಕಾರಿಗಳ ಮತದಾರರ ಪಟ್ಟಿಯನ್ನು ಪರಿಷ್ಕರಿಸುವ ಬಗ್ಗೆ.

ಉಲ್ಲೇಖ:
01. ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ಕಾಯಿದೆ 2014ರ ಅಧಿಸೂಚನೆ ಸಂಖ್ಯೆ : ಸಂವ್ಯಶಾಇ/58/ಶಾಸನ/2014, ಬೆಂಗಳೂರು, ದಿನಾಂಕ : 06.09.2014.
02. ಆಯುಕ್ತರು, ಸಹಕಾರ ಚುನಾವಣಾ ಪ್ರಾಧಿಕಾರ, ಬೆಂಗಳೂರು ಇವರ ದಿನಾಂಕ : 27.04.2015 ಮತ್ತು 28.04.2015ರ ಮೈಸೂರು ಮತ್ತು ಮಡಿಕೇರಿ ಜಿಲ್ಲೆಗಳ ಪ್ರವಾಸ ಕಾರ್ಯಕ್ರಮದಂತೆ.

★★★★★

ಭಾರತದ ಸಂವಿಧಾನಕ್ಕೆ 2011ರಲ್ಲಿ ಮಾಡಲಾದ 97ನೇ ತಿದ್ದುಪಡಿಯಂತೆ ಸಂಹಿತೆ 243 ಝಡ್.ಕೆ(2)ನ್ನು ಗಮನದಲ್ಲಿಟ್ಟುಕೊಂಡು ಕರ್ನಾಟಕ ರಾಜ್ಯ ಸರ್ಕಾರವು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ಕ್ಕೆ 2012 ರಲ್ಲಿ ತಿದ್ದುಪಡಿ ಮಾಡಿದ್ದು, ಅದರಂತೆ ಪ್ರಕರಣ 39ಎಎ ರೀತ್ಯಾ ಸರ್ಕಾರವು ತನಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸಹಕಾರ ಚುನಾವಣಾ ಆಯೋಗವನ್ನು ರಚನೆ ಮಾಡಿ ದಿನಾಂಕ : 18.03.2013ರಂತೆ ಅಧಿಸೂಚನೆಯನ್ನು ಹೊರಡಿಸಿರುತ್ತದೆ. ಅದೇ ರೀತಿಯಲ್ಲಿ ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ಅಧಿನಿಯಮ 2012ರ ಪ್ರಕರಣ 26ಎ ರೀತ್ಯಾ ಸೌಹಾರ್ದ ಸಹಕಾರಿಗಳಿಗೂ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 39ಎಎ ಅವಕಾಶದಂತೆ ಚುನಾವಣೆ ನಡೆಸುವ ಜವಾಬ್ದಾರಿಯನ್ನು ಚುನಾವಣಾ ಪ್ರಾಧಿಕಾರವು ಹೊಂದಿದೆ.

ದಿನಾಂಕ : 10.07.2013ರಂದು ಅಧಿಸೂಚನೆ ಸಂಖ್ಯೆ : ಸಿ.ಒ.14.ಸಿಎಲ್ಎಂ.2013ನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ಹೊರಡಿಸಿ ಕರ್ನಾಟಕ ಸಹಕಾರ ಸಂಘಗಳ ನಿಯಮಗಳಿಗೆ ತಿದ್ದುಪಡಿ ಮಾಡಿದ್ದು ಸದರಿ ತಿದ್ದುಪಡಿ ನಿಯಮ 10.07.2013 ರಿಂದ ಜಾರಿಗೆ ಬಂದಿರುತ್ತದೆ.

ಸಹಕಾರ ಚುನಾವಣಾ ಆಯೋಗ ರಚನೆಯಾದ 2013ನೇ ಸಾಲಿನಿಂದ ಮೂರು ವರ್ಷಗಳಲ್ಲಿ ಪ್ರತಿ ವರ್ಷ ಸುಮಾರು 8000 ಸಹಕಾರ ಸಂಘಗಳಿಗೆ/ಸಹಕಾರಿಗಳಿಗೆ ಚುನಾವಣೆಗಳನ್ನು ನಡೆಸಲಾಗಿದೆ. ಈ ಸಂದರ್ಭದಲ್ಲಿ ನಿಯಮಾನುಸಾರ ಚುನಾವಣಾ ಪ್ರಕ್ರಿಯೆಯನ್ನು ನಡೆಸಬೇಕಾದಲ್ಲಿ ಪ್ರತಿ ಹಂತದಲ್ಲಿ ಜವಾಬ್ದಾರಿಯಿಂದ ಕೆಲಸ ನಿರ್ವಹಿಸಿದಲ್ಲಿ ಮಾತ್ರ ಪಾರದರ್ಶಕವಾಗಿ ಮತ್ತು ಪರಿಣಾಮಕಾರಿಯಾಗಿ ಚುನಾವಣೆಯನ್ನು ಮಾಡಬಹುದಾಗಿರುತ್ತದೆ. ಪ್ರತಿ ಸಹಕಾರ ಸಂಘಗಳ ಕಾರ್ಯನಿರ್ವಹಣೆ ಇರುವ ಸಹಕಾರ ಸಂಘಗಳ ಅಧಿನಿಯಮ ಮತು ನಿಯಮಗಳು 1960 ರ ಅಧಿಕಾರದನ್ವಯ ಮತ್ತು ಬೈಲಾಗಳನ್ವಯ ಪ್ರಾಧಿಕಾರಕ್ಕೆ ದತ್ತವಾದ ಶಾಸನಬದ್ಧ ಚುನಾವಣೆಗಳು ನಡೆದಲ್ಲಿ ಇಡೀ ಪ್ರಕ್ರಿಯೆ ಪಾರದರ್ಶಕವಾಗಿ ಇರಲು ಸಾಧ್ಯವಾಗುವುದು.

--2

ಚುನಾವಣಾ ಪ್ರಕ್ರಿಯೆಯ [illegible] ಹಂತದಲ್ಲಿ ಅತ್ಯಂತ ಮಹತ್ವದ ಘಟ್ಟವೆಂದರೆ ಪ್ರತಿ ಸಹಕಾರ ಸಂಘದ ಮತದಾರರ ಪಟ್ಟಿಯ ತಯಾರಿಕೆ ಮತ್ತು ಅದರ ಅರ್ಥೈಕ್ಷಣೆಯೆಂದರೆ ತಪ್ಪಾಗಲಾರದು. ಚುನಾವಣಾ ಪ್ರಾಧಿಕಾರದ ಅತಿ ಗಂಭೀರವಾದ ಕೆಲಸದಲ್ಲಿ ಸಮರ್ಪಕವಾದ ಮತದಾರರ ಪಟ್ಟಿಯನ್ನು ತಯಾರಿಸಿದಲ್ಲಿ ಇಡೀ ಚುನಾವಣೆಗೆ ಇದು ಬುನಾದಿಯಾಗುತ್ತದೆ. ಪ್ರತಿ ಸಹಕಾರ ಸಂಘಗಳು ಹೆಚ್ಚಿನ ಮಹತ್ವವನ್ನು ಈ ಕಾರ್ಯಕ್ಕೆ ನೀಡಲೇಬೇಕಾಗುತ್ತದೆ. 2013 ರಿಂದ ಮೂರು ಸಾಲಿನಲ್ಲಿ ಸುಮಾರು 25000 ಸಹಕಾರ ಸಂಘಗಳ ಚುನಾವಣೆಗಳನ್ನು ಪ್ರಾಧಿಕಾರದ ನಿರ್ದೇಶನದಲ್ಲಿ ನಡೆಸಲಾಗಿದೆ. ಈ ಚುನಾವಣೆಗಳ ಮತದಾರರ ಪಟ್ಟಿಯನ್ನು ತಯಾರಿಸುವ ವೇಳೆ ಬಹಳಷ್ಟು ಗಂಭೀರವಾದ ಲೋಪದೋಷಗಳು ಪ್ರಾಧಿಕಾರದ ಗಮನಕ್ಕೆ ಬಂದಿರುತ್ತವೆ. ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಚುನಾವಣೆ ಪೂರ್ವದಲ್ಲಿ ತಯಾರಿಸಬೇಕಾದ ಕರಡು ಮತದಾರರ ಪಟ್ಟಿಗಳಲ್ಲಿ ಅಧಿನಿಯಮಗಳಲ್ಲಿ ಅಳವಡಿಸಿರುವ ಕಾನೂನಿಗೆ ವ್ಯತಿರಿಕ್ತವಾಗಿ ಲೋಪ-ದೋಷಯುಕ್ತ ಪಟ್ಟಿಗಳನ್ನು ಮಾಡಿರುವುದು ಹಲವು ದೂರುಗಳ ಮೂಲಕ ಪ್ರಾಧಿಕಾರದ ಗಮನಕ್ಕೆ ಬಂದಿರುತ್ತದೆ. ಇದರಿಂದ ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟಿಸುವ ಹಂತದಲ್ಲಿ ತುಂಬಾ ತೊಂದರೆಯಾಗಿ ನ್ಯಾಯ ಬದ್ಧವಾಗಿ ಚುನಾವಣೆ ನಡೆಸಲು ಬೇರೆ ಇಲಾಖೆಗಳಿಂದ ನೇಮಕಾತಿ ಮಾಡಿದ ರಿಟರ್ನಿಂಗ್ ಆಫೀಸರ್‌ಗಳಿಗೆ ತೊಂದರೆಯಾಗಿ ನಂತರ ಚುನಾವಣೆ ವಿವಾದಗಳಿಗೆ ಆಸ್ಪದ ನೀಡಲಾಗಿರುತ್ತದೆ. ಪ್ರಾಧಿಕಾರದಿಂದ ಕಾಲಾನುಕಾಲಕ್ಕೆ ನಿರ್ದೇಶನ ನೀಡಿದ್ದರೂ ಸಹಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ತಪ್ಪಿನಿಂದ ಗಂಭೀರವಾದ ಲೋಪದೋಷಗಳು ಚುನಾವಣೆಯ ಸಂದರ್ಭದಲ್ಲೂ ಮರುಕಳಿಸುತ್ತಿವೆ.

ಪ್ರತಿ ಸಹಕಾರ ಸಂಘದ ಚುನಾವಣಾ ಪ್ರಕ್ರಿಯೆಯಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಯ ಪಾತ್ರ ಅತ್ಯಂತ ಮಹತ್ವವಾದದ್ದು. ಚುನಾವಣಾ ಕಾನೂನಿನ್ವಯ ಮತದಾರರ ಪಟ್ಟಿಯನ್ನು ತಯಾರಿಸುವ ಸಂದರ್ಭದಲ್ಲಿ ಈ ಕೆಳಕಂಡ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಸಂಘದ ಸದಸ್ಯರಾಗಿದ್ದು ನಿಧನ ಹೊಂದಿದ ಸದಸ್ಯರನ್ನು ಮತದಾರರ ಪಟ್ಟಿಯಿಂದ ಹೊರತೆಗೆದು ಅವರ ನಾಮಿನಿಗಳನ್ನು ಸೇರಿಸುವುದು, ಹೊಸದಾಗಿ ಸೇರ್ಪಡೆಯಾದ ಮತದಾರರನ್ನು ಪಟ್ಟಿಯಲ್ಲಿ ಸೇರಿಸುವುದು, ಅನರ್ಹಗೊಂಡ ಮತದಾರರನ್ನು ಪಟ್ಟಿಯಿಂದ ಕೈಬಿಡುವುದು, ಸಂಘದ ಕಾರ್ಯವ್ಯಾಪ್ತಿಯಲ್ಲಿ ವಾಸವಿಲ್ಲದ ಮತದಾರರನ್ನು ಕೈಬಿಡುವುದು ಮತ್ತು ಇನ್ನಿತರೆ ಕಾರಣಗಳಿಂದ ಸದಸ್ಯತ್ವ ರದ್ದಾದ ಮತದಾರರಿದ್ದಲ್ಲಿ ಅವರನ್ನು ಕೈಬಿಡುವುದು. ಇವುಗಳನ್ನು ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪ್ರತೀ ವರ್ಷ ಮತದಾರರ ಪಟ್ಟಿಯಲ್ಲಿ ಅಳವಡಿಸಿಕೊಂಡು ಮತದಾರರ ಪಟ್ಟಿಯನ್ನು ಪರಿಷ್ಕರಣೆ ಮಾಡಿದಲ್ಲಿ ಯಾವುದೇ ಲೋಪ-ದೋಷಗಳು ಇಲ್ಲದ ಮತದಾರರ ಪಟ್ಟಿಯನ್ನು ತಯಾರಿಸಲು ಸಾಧ್ಯವಾಗುತ್ತದೆ. ಹಲವು ಪ್ರಾಥಮಿಕ ಮತ್ತು ಮಾಧ್ಯಮಿಕ ಸಹಕಾರ ಸಂಘಗಳಲ್ಲಿ ಸದಸ್ಯರ ಷೇರು ಲೆಡ್ಜರ್ ನಿರ್ವಹಣೆಯಿಲ್ಲದಿರುವುದು ಮತ್ತು ಅದರ ವಾರ್ಷಿಕ ತಪಾಸಣೆ ಮೇಲಾಧಿಕಾರಿಗಳಿಂದ ಕಾಲಾನುಕಾಲಕ್ಕೆ ಆಗದಿರುವುದರಿಂದ ಅನೇಕ ಲೋಪ-ದೋಷಗಳಿಗೆ ಎಡೆಮಾಡಿಕೊಟ್ಟಿವೆ. ಹಲವು ಜಿಲ್ಲೆಗಳಲ್ಲಿ ಈ ಪ್ರಾಧಿಕಾರದ ಅಧಿಕಾರಿಗಳು ಸಂಘದ ಹಂತದಲ್ಲಿ ಇರುವ ದಾಖಲಾತಿಗಳನ್ನು ಪರಿಶೀಲಿಸಿದಾಗ ಸದಸ್ಯರ ಷೇರು ಲೆಡ್ಜರ್‌ನಲ್ಲಿ ಸದಸ್ಯರ ಭಾವಚಿತ್ರಗಳು ಲಭ್ಯವಿರುವುದಿಲ್ಲ. ಸದಸ್ಯರು ಮೃತಪಟ್ಟ ಸಂದರ್ಭದಲ್ಲಿ ಅವರ ಅಧಿಕೃತ ನಾಮಿನಿಗಳ ಹೆಸರಿನಲ್ಲಿ ಷೇರು ವರ್ಗಾವಣೆ ಪ್ರಕ್ರಿಯೆ ನಡೆಯದೆ ಇರುವುದು ಮತ್ತು ಕೆಲವು ಸಂದರ್ಭಗಳಲ್ಲಿ ಈ ಷೇರು ಲೆಡ್ಜರ್ ಸಹಾ ಲಭ್ಯವಿಲ್ಲದಿರುವುದು ಗಮನಕ್ಕೆ ಬಂದಿರುತ್ತದೆ. ಇದರಿಂದ ಸಮರ್ಪಕವಾದ ಮತದಾರರ ಪಟ್ಟಿಯನ್ನು ತಯಾರಿಸಲು ಸಾಧ್ಯವಿರುವುದಿಲ್ಲ. 2012ರ ಅಧಿನಿಯಮದಂತೆ ಕಳೆದ 5 ವರ್ಷಗಳಲ್ಲಿ ಕನಿಷ್ಠ 3 ವರ್ಷಗಳು ಕಡ್ಡಾಯವಾಗಿ ವಾರ್ಷಿಕ ಮಹಾಸಭೆಗೆ ಹಾಜರಾದ ಬಗ್ಗೆ ಹಾಜರಾತಿ ವಹಿಯನ್ನು ಪ್ರತಿ ಸಹಕಾರ ಸಂಘ ನಿರ್ವಹಿಸಲೇಬೇಕಾಗುತ್ತದೆ. ಈಗಾಗಲೇ ಮೂರು ವರ್ಷಗಳು ಕಳೆದಿರುವುದರಿಂದ 2016ನೇ ಸಾಲಿನಲ್ಲಿ ಚುನಾವಣೆ ಜರುಗಲಿರುವ ಸಹಕಾರ ಸಂಘಗಳಿಗೆ ಕಡ್ಡಾಯವಾಗಿ ಈ ಎರಡು ನಿಯಮಗಳನ್ವಯ ಸದಸ್ಯ ಮತದಾನದ ಹಕ್ಕನ್ನು

--3

ನಿರ್ಣಯಿಸಬೇಕಾಗುತ್ತದೆ. ಇದರ ಉಲ್ಲಂಘನೆಯಾದಲ್ಲಿ ಅಂತಹ ಸದಸ್ಯರಿಗೆ ಮತದಾನದ ಹಕ್ಕು ಇರುವುದಿಲ್ಲ. ಸಂಘದ ಸದಸ್ಯರು ಸಂಘದೊಂದಿಗೆ ಕಳೆದ 5 ವರ್ಷಗಳಲ್ಲಿ ನಡೆಸಿರುವ ಕನಿಷ್ಟ ವ್ಯವಹಾರವನ್ನು ತೋರಿಸುವ ಲೆಡ್ಜರ್ ಸಹಾ ತಪ್ಪದೆ ನಿರ್ವಹಿಸಬೇಕಾಗುತ್ತದೆ. ಹಲವು ಜಿಲ್ಲೆಗಳಲ್ಲಿ ಪ್ರವಾಸ ಕೈಗೊಂಡಾಗ ಬಹಳಷ್ಟು ಸಹಕಾರ ಸಂಘಗಳು ಈ ಎರಡು ವಹಿಗಳನ್ನು ನಿರ್ವಹಿಸದೆ ಇರುವುದು ಗಮನಕ್ಕೆ ಬಂದಿರುತ್ತದೆ.

ಈ ಕಾರಣದಿಂದ ಕೂಡಲೇ ಸಂಘಗಳ ಎಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಮೇಲಿನ ಮೂರು ವಹಿಗಳನ್ನು ತಪ್ಪದೇ ನಿರ್ವಹಿಸತಕ್ಕದ್ದು. ಮೇಲ್ವಿಚಾರಣಾಧಿಕಾರಿಗಳುಈ ಬಗ್ಗೆ ಸೂಕ್ತ ನಿರ್ದೇಶನ ನೀಡತಕ್ಕದು ಮತ್ತು ಮೇಲ್ವಿಚಾರಣೆ ಮಾಡತಕ್ಕದ್ದು. ತಪ್ಪಿದ್ದಲ್ಲಿ ನಿಯಮಾನುಸಾರ ಚುನಾವಣೆ ನಡೆಸಲು ತೊಂದರೆಯಾಗುತ್ತದೆಂದು ಮನವರಿಕೆ ಮಾಡಲಾಗಿದೆ.

**ಮತದಾರರ ಪಟ್ಟಿಯ ಪರಿಷ್ಕರಣೆ :-**

ಪ್ರಸ್ತುತ ಚುನಾವಣೆ ನಡೆಸುವ ಪೂರ್ವದಲ್ಲಿ 45 ದಿನಗಳ ಮೊದಲು ಕರಡು ಮತದಾರರ ಪಟ್ಟಿಯನ್ನು ಪ್ರಕಟಿಸುವ ಮೊದಲು ಒಂದೆರಡು ವಾರದಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಆಯಾ ಸಂಘದ ಮತದಾರರ ಪಟ್ಟಿಯನ್ನು ಪರಿಶೀಲನೆಗೆ ಒಳಪಡಿಸುವ ಪದ್ಧತಿಯಿದೆ. ಅಲ್ಲಿಯವರೆಗೆ ಸಾಧಾರಣವಾಗಿ ಯಾರೂ ಸಹಾ ಇದರ ಬಗ್ಗೆ ಯಾವುದೇ ರೀತಿಯ ಕ್ರಮ ಕೈಗೊಳ್ಳುತ್ತಿಲ್ಲ. ಈ ಕಾರಣದಿಂದ ಪ್ರತಿ ವರ್ಷ ಸದಸ್ಯರ ವಹಿಯಲ್ಲಿ ಬರುವ ಮಾರ್ಪಾಡುಗಳಾದ ನಿಧನಹೊಂದಿದ ಸದಸ್ಯರು ಮತ್ತು ಅವರ ನಾಮಿನಿಗಳು, ಹೊಸ ಸದಸ್ಯರು, ಸಂಘದ ಕಾರ್ಯಕ್ಷೇತ್ರದಲ್ಲಿ ವಾಸಿಸದ ಸದಸ್ಯರು, ವಾರ್ಷಿಕ ಸಾಮಾನ್ಯ ಸಭೆಗಳಲ್ಲಿ ಹಾಜರಾಗದ ಸದಸ್ಯರು, ಕನಿಷ್ಟ ವ್ಯವಹಾರದಲ್ಲಿ ತೊಡಗಿಸಿಕೊಳ್ಳದ ಸದಸ್ಯರ ಬಗ್ಗೆ ಯಾವುದೇ ಪರಿಶೀಲನೆ ಮಾಡದಿರುವುದರಿಂದ ಕೇವಲ ಚುನಾವಣೆ ದಿನಾಂಕ ಪ್ರಕಟವಾದ 45 ದಿನಗಳ ಪೂರ್ವದಲ್ಲಿ ನಿಖರವಾದ ಮಾಹಿತಿ ಸಂಗ್ರಹಿಸಿ, ಯಾವುದೇ ಲೋಪ-ದೋಷಗಳಿಗೆ ಅವಕಾಶ ನೀಡದೆ ಪಾರದರ್ಶಕವಾದ ಮತದಾರರ ಪಟ್ಟಿಯನ್ನು ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮಾಡುವುದು ತುಂಬಾ ಕಷ್ಟದ ಕೆಲಸವಾಗುತ್ತದೆ. ಇದೇ ವಿಷಯದಲ್ಲಿ ಹಲವು ಸಹಕಾರ ಸಂಘಗಳಿಂದ ದೂರುಗಳು ಸ್ವೀಕೃತವಾಗಿರುತ್ತದೆ. ಎಲ್ಲಿಯವರೆಗೆ ದೂರು ರಹಿತ ಮತದಾರರ ಪಟ್ಟಿಯನ್ನು ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ತಯಾರಿಸುವುದಿಲ್ಲವೋ ಅಲ್ಲಿಯವರೆಗೆ ಚುನಾವಣೆಗಳಲ್ಲಿ ಸಂಪೂರ್ಣ ಪಾರದರ್ಶಕತೆಯನ್ನು ನಿರೀಕ್ಷಿಸಲು ಸಾಧ್ಯವಾಗುವುದಿಲ್ಲ. ಈ ಹಿನ್ನಲೆಯಲ್ಲಿ ಮತದಾರರ ಪಟ್ಟಿಯನ್ನು ಕೇವಲ ಚುನಾವಣೆ ಪೂರ್ವದಲ್ಲಿ ತಯಾರಿಸುವುದಕ್ಕಿಂತ **ಪ್ರತಿ ವರ್ಷ ಕಡ್ಡಾಯವಾಗಿ ಏಪ್ರಿಲ್-1 ರಂದು ಎಲ್ಲಾ ಸಹಕಾರ ಸಂಘಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ತಮ್ಮ ಸಂಘಗಳ ಮತದಾರರ ಪಟ್ಟಿ ಪರಿಷ್ಕರಣೆ ಮಾಡಲು ಸೂಚನೆ ನೀಡಲಾಗಿದೆ.** ಎಲ್ಲಾ ರೀತಿಯ ವಹಿಗಳನ್ನು ಆಯಾ ಸಂಘದ ಆಡಳಿತ ಮಂಡಳಿ ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಯಲ್ಲಿ ಇರುವುದರಿಂದ ಕಡ್ಡಾಯವಾಗಿ ಪ್ರತಿ ವರ್ಷ ಮತದಾರರ ಪಟ್ಟಿಯನ್ನು ಪರಿಷ್ಕರಣೆಯನ್ನು ಮಾಡಬೇಕೆಂದು ಕೋರಲಾಗಿದೆ. ಪ್ರತಿ ಸಂಘದಲ್ಲಿ ಪರಿಷ್ಕರಣೆ ಮಾಡುವ ಹಂತದಲ್ಲಿ ಪ್ರತಿ ಸದಸ್ಯರ ಭಾವಚಿತ್ರದೊಂದಿಗೆ ಮತದಾರರ ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು. ಸಂಘಗಳು ತನ್ನ ಪ್ರತಿಯೊಬ್ಬ ಸದಸ್ಯರುಗಳಿಗೆ ಭಾವಚಿತ್ರವಿರುವ ಗುರುತಿನ ಚೀಟಿಯನ್ನು ವಿತರಿಸಲು ಕ್ರಮವಿಡುವಂತೆ ಸೂಚಿಸಲಾಗಿದೆ. ಸಾರ್ವತ್ರಿಕ ಚುನಾವಣೆಯ ಮತದಾರರ ಪಟ್ಟಿಯನ್ನು ಪರಿಷ್ಕರಣೆ ಮಾಡುವ ರೀತಿಯಲ್ಲಿಯೇ ಜವಾಬ್ದಾರಿಯುತವಾಗಿ ಮಾಡಿ, ಪ್ರತಿ ಸದಸ್ಯರ ಭಾವಚಿತ್ರದೊಂದಿಗೆ ಗುರುತಿನ ಚೀಟಿಯನ್ನು ವಿತರಿಸಿದಲ್ಲಿ ಸಂಪೂರ್ಣ ಪಾರದರ್ಶಕತೆ ಕಾಪಾಡಲು ಸಾಧ್ಯವಾಗುತ್ತದೆ.

ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಮತದಾರರ ಪಟ್ಟಿಯನ್ನು ಪರಿಷ್ಕರಣೆ ಮಾಡಿದ ನಂತರ ಇದರ ಪರಿಶೀಲನೆ ಮತ್ತು ದೃಢೀಕರಣವನ್ನು ಆಯಾ ಸಂಬಂಧಪಟ್ಟ ಕಾರ್ಯವ್ಯಾಪ್ತಿಯ ಸಹಕಾರ ಸಂಘಗಳ ಸಹಾಯಕ / ಉಪ / ಜಂಟಿ / ಅಪರನಿಬಂಧಕರು ಇದರಲ್ಲಿ ಹೆಚ್ಚಿನ ಮುತುವರ್ಜಿ ವಹಿಸಿ ಜವಾಬ್ದಾರಿಯಿಂದ ಕೆಲಸ ಮಾಡಿದಲ್ಲಿ ಎಲ್ಲಾ ಸಹಕಾರ ಸಂಘಗಳ ಮತದಾರರ ಪಟ್ಟಿಯ ಪರಿಷ್ಕರಣೆಯಾಗಿ ಅವುಗಳ ಕಾರ್ಯನಿರ್ವಹಣೆ ಮತ್ತು ಕಾರ್ಯಕ್ಷಮತೆ ಹೆಚ್ಚುವುದೆಂದು ಅಭಿಪ್ರಾಯ ಪಡಲಾಗಿದೆ. ಈ ನಿಟ್ಟಿನಲ್ಲಿ ಮಹಾಮಂಡಳಿ / ಜಿಲ್ಲಾ ಮಟ್ಟದ ಯೂನಿಯನ್ / ಜಿಲ್ಲಾ ಬ್ಯಾಂಕಿನ ಮುಖ್ಯ ಕಾರ್ಯನಿರ್ವಹಣಾಧಿಕಾರಗಳು ಸಹ ಮುತುವರ್ಜಿ ವಹಿಸಿ ತಮಗೆ ಸಂಬಂಧಿಸಿದ ಎಲ್ಲಾ ಸಹಕಾರ ಸಂಘಗಳಿಗೆ ತಮ್ಮ ಮೇಲ್ವಿಚಾರಣಾ ಅಧಿಕಾರಿಗಳಿಗೆ ಸೂಚನೆ ನೀಡಿ ಸಹಕರಿಸಿದಲ್ಲಿ ಈ ಮತದಾರರ ಪಟ್ಟಿಯ ಪರಿಷ್ಕರಣೆಯ ಕಾರ್ಯವು ಯಶಸ್ವಿಯಾಗುವುದರಲ್ಲಿ ಯಾವುದೇ ಅನುಮಾನವಿಲ್ಲ. ಈ ಕಾರಣದಿಂದ ತಾವೆಲ್ಲರೂ ಕೈಜೋಡಿಸಿ ಈ ಕಾರ್ಯವನ್ನು ಯಶಸ್ವಿ ಈ ಮೂಲಕ ನಿರ್ದೇಶಿಸಿದೆ

(ಎನ್.ಸಿ.ಮುನಿಯಪ್ಪ)
ಆಯುಕ್ತರು,
ಸಹಕಾರ ಚುನಾವಣಾ ಪ್ರಾಧಿಕಾರ,
ಬೆಂಗಳೂರು.

ಪ್ರತಿಯನ್ನು ಈ ಕೆಳಕಂಡವರುಗಳಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿದೆ :-

01. ಸರ್ಕಾರದ ಅಪರಮುಖ್ಯ ಕಾರ್ಯದರ್ಶಿಗಳು, ಸಹಕಾರ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
02. ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ, ನಂ.1,ಆಲಿಆಸ್ಕರ್ ರಸ್ತೆ, ಬೆಂಗಳೂರು.
03. ಸಹಕಾರ ಸಂಘಗಳ ಅಪರ ನಿಬಂಧಕರು, (ಆಡಳಿತ ಮತ್ತು ಸಿಬ್ಬಂದಿ), (ಪತ್ತು), (ಕೈಗಾರಿಕೆ ಮತ್ತು ಹೈನುಗಾರಿಕೆ), (ವಸತಿ ಮತ್ತು ಇತರೆ) ಸಹಕಾರ ಸಂಘಗಳ ನಿಬಂಧಕರ ಕಛೇರಿ, ಬೆಂಗಳೂರು.
04. ಸಹಕಾರ ಸಂಘಗಳ ಜಂಟಿನಿಬಂಧಕರು, (ಐಸಿಡಿಪಿ), (ಕಾನೂನುಕೋಶ) ಮತ್ತು (ಪಟ್ಟಣಬ್ಯಾಂಕುಗಳ ವಿಭಾಗ) ಸಹಕಾರ ಸಂಘಗಳ ನಿಬಂಧಕರ ಕಛೇರಿ, ಬೆಂಗಳೂರು.
05. ಸಹಕಾರ ಸಂಘಗಳ ಜಂಟಿನಿಬಂಧಕರು, ಬೆಂಗಳೂರು ಪ್ರಾಂತ / ಬೆಳಗಾವಿ ಪ್ರಾಂತ / ಮೈಸೂರು ಪ್ರಾಂತ / ಕಲಬುರಗಿ ಪ್ರಾಂತ.
06. ಸಹಕಾರ ಸಂಘಗಳ ಉಪನಿಬಂಧಕರು, .....................................................ಜಿಲ್ಲೆ..........................................
07. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ., ಚಾಮರಾಜಪೇಟೆ, ಬೆಂಗಳೂರು.
08. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ನಿಯಮಿತ, ಚಾಮರಾಜಪೇಟೆ, ಬೆಂಗಳೂರು.
09. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಕೈಗಾರಿಕಾ ಸಹಕಾರ ಬ್ಯಾಂಕ್ ನಿ., ಬಸವನಗುಡಿ, ಬೆಂಗಳೂರು.
10. ರಾಜ್ಯ ಮಟ್ಟದ ಎಲ್ಲಾ ಮಹಾಮಂಡಳಗಳ ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ.
11. ಮುಖ್ಯಕಾರ್ಯನಿರ್ವಹಣಾಧಿಕಾರಿಗಳು,ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ನಿ.,.............................................ಜಿಲ್ಲೆ.
12. ವ್ಯವಸ್ಥಾಪಕ ನಿರ್ದೇಶಕರು, ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ., (ಮಿಲ್ಕ್‌ಯೂನಿಯನ್) ............................................................ಜಿಲ್ಲೆ.
13. ಮುಖ್ಯಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಸಹಕಾರಿ ಯೂನಿಯನ್ ನಿಯಮಿತ,..........................................ಜಿಲ್ಲೆ.
14. ಸಹಕಾರ ಚುನಾವಣಾ ಪ್ರಾಧಿಕಾರ, ಬೆಂಗಳೂರು ಇದರ ಜಂಟಿನಿಬಂಧಕರು / ಉಪಕಾರ್ಯದರ್ಶಿ / ಉಪನಿಬಂಧಕರು / ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಬೆಂಗಳೂರು ಪ್ರಾಂತ / ಬೆಳಗಾಗಿ ಪ್ರಾಂತ / ಮೈಸೂರು ಪ್ರಾಂತ / ಕಲಬುರಗಿ ಪ್ರಾಂತ.
15. ಹೆಚ್ಚುವರಿ ಪ್ರತಿಗಳು ಸುತ್ತೋಲೆ ಕಡತಕ್ಕೆ.